ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD
ISSN: 2582-2284
Vol-2 Issue 6, MAY-JUNE 2021, 98-110
©IIMRD, Mysuru
IIMRD JOURNALS

www.iimrd.com

# ಮಹಾತ್ಮ ಗಾಂಧೀಜಿಯವರ ಹರಿಜನೋದ್ಧಾರ ಕಾರ್ಯಕ್ರಮಗಳು ಮತ್ತು ಅದರ ಪ್ರಸ್ತುತತೆ

**ಆನಂದ ಎಸ್***

**ಪೀಠಿಕೆ**

ಆಧುನಿಕ ಭಾರತದ ಕಾಲಘಟ್ಟದಲ್ಲಿ ಜನಮಾನಸವನ್ನು ಬಹು ಗಾಢವಾಗಿ ಪ್ರಭಾವಿಸಿದ ವ್ಯಕ್ತಿಗಳಲ್ಲಿ ಮಹಾತ್ಮಗಾಂಧಿ ಸಹ ಒಬ್ಬರು. ಗಾಂಧೀಜಿಯವರ ಪ್ರಭಾವ ಕೇವಲ ಸ್ವಾತಂತ್ರ್ಯ ಚಳುವಳಿಯ ನಾಯಕತ್ವಕಷ್ಟೆ ಸೀಮಿತಗೊಳ್ಳದೇ ಅವರು ಸಮಾಜದಲ್ಲಿ ಮನೆ ಮಾಡಿದ್ದ ಅಸಮಾನತೆ, ಶೋಷಣೆ, ಮೂಢನಂಬಿಕೆಗಳ ವಿಮೋಚನೆಗಾಗಿ ಮಾಡಿದ ಪ್ರಯತ್ನಗಳಲ್ಲೂ ಅಡಗಿದೆ. ಗಾಂಧೀಜಿಯವರು ಸ್ವಾತಂತ್ರ್ಯ ಚಳುವಳಿಯ ಮುಖೇನ ಭಾರತವನ್ನು ಪರಕೀಯರ ದಾಸ್ಯದಿಂದ ಮುಕ್ತಗೊಳಿಸುವ ಹಾಗೂ ಅದರೊಂದಿಗೆ ಸುಭದ್ರ ರಾಷ್ಟ್ರ ನಿರ್ಮಾಣದ ಕನಸನ್ನು ಕಂಡಿದ್ದರು. ಈ ಸಲುವಾಗಿ ತಮ್ಮ ಹೋರಾಟದ ಜೊತೆ ಜೊತೆಯಲ್ಲೇ ರಚನಾತ್ಮಕ ಕಾರ್ಯಕ್ರಮಗಳನ್ನು ರೂಪಿಸಿ ಅವುಗಳನ್ನು ಸಕ್ರಿಯವಾಗಿ ಕಾರ್ಯಗತಗೊಳಿಸಲು ಶ್ರಮಿಸಿದರು.

ಯಾವ ಮಾರ್ಗಾನುಸರಣಿ ರಾಷ್ಟ್ರೀಯ ಯೋಧರನ್ನು ಸಜ್ಜುಗೊಳಿಸಿ ಸ್ವಾತಂತ್ರ್ಯವನ್ನು ಗಳಿಸಿಕೊಡುತ್ತದೆಯೋ ಅದೇ ಮಾರ್ಗಾನುಸರಣಿ ದೇಶದಲ್ಲಿ ಶಾಂತಿ ಸಮೃದ್ಧಿಯನ್ನು ನೆಲೆಸುವಂತೆ ಮಾಡುತ್ತದೆ. ಸತ್ಯ ಮತ್ತು ಅಹಿಂಸೆಗಳಿಂದ ಗಳಿಸುವ ಪೂರ್ಣ ಸ್ವಾತಂತ್ರ್ಯ ರಚನಾತ್ಮಕ ಕಾರ್ಯಗಳ ಹೊರತಾಗಿ ಬರಲು ಸಾಧ್ಯವೇ ಇಲ್ಲ ಎಂಬುದು ಗಾಂಧೀಜಿಯವರ ನಂಬಿಕೆ ಆಗಿತ್ತು.[1]

1920ರಲ್ಲಿ ಬದಲಾದ ಸನ್ನಿವೇಶದಲ್ಲಿ ಗಾಂಧೀಜಿಯವರು ಬ್ರಿಟಿಷರನ್ನು ಸೆದೆ ಬಡಿಯಲು ಅಸಹಕಾರ ಚಳುವಳಿಯ ಮೊರೆ ಹೋದರು. ಆದರೆ ಚಳುವಳಿಯ ಸಂದರ್ಭದಲ್ಲಿ ಅನಿರೀಕ್ಷಿತವಾಗಿ ಜರುಗಿದ ಚೌರಿಚೌರ ಹಿಂಸಾತ್ಮಕ ಘಟನೆಯಿಂದ ನೊಂದ ಗಾಂಧೀಜಿ ಚಳುವಳಿಯನ್ನು ಹಿಂಪಡೆದರು. ದೇಶದಲ್ಲಿ ಪೂರ್ಣಪ್ರಮಾಣದ ಅಹಿಂಸಾತ್ಮಕ ಚಳುವಳಿಗೆ ಪೂರಕವಾದ ವಾತಾವರಣ ನಿರ್ಮಾಣವಾಗಿಲ್ಲ ಎಂದು ಅರಿತ ಗಾಂಧೀಜಿ ಅಂತಹ ವಾತಾವರಣ ಮೂಡಿಸುವ ಸಲುವಾಗಿ 18

---

** ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರ್ಕಾರಿ ಕಲಾ ಕಾಲೇಜು, ಬೆಂಗಳೂರು.*

[1] ಮೌಲಾನಾ ಅಬ್ದುಲ್ ಕಲಾಂ ಅಜಾದ್ (ಸಂ.) (1953). ಗಾಂಧಿಯನ್ ಔಟ್‌ಲುಕ್ ಅಂಡ್ ಟೆಕ್ನಿಕ್ಸ್ ಗೌರ್ನಮೆಂಟ್ ಆಫ್ ಇಂಡಿಯಾ, ನ್ಯೂಡೆಲ್ಲಿ, ಪು.359.

ಅಂಶಗಳುಳ್ಳ ರಚನಾತ್ಮಕ ಕಾರ್ಯಕ್ರಮಗಳನ್ನು ರೂಪಿಸಿ ಅವುಗಳ ಜಾರಿಗೆ ಮುಂದಾದರು. ಒಂದು ಕೋಟಿ ಜನರನ್ನು ಕಾಂಗ್ರೆಸ್ಸಿನ ಪ್ರಾಥಮಿಕ ಸದಸ್ಯರನ್ನಾಗಿ ಮಾಡುವುದು, ಸ್ವದೇಶಿ, ಅಸ್ಪೃಶ್ಯತಾ ನಿವಾರಣೆ, ಪಾನನಿರೋಧ, ಮಹಿಳೆಯರ ಏಳಿಗೆ, ಸರ್ವಧರ್ಮೀಯರ ಐಕ್ಯತೆ, ವಯಸ್ಕರ ಶಿಕ್ಷಣ, ರಾಷ್ಟ್ರೀಯ ಶಾಲೆಗಳ ಸ್ಥಾಪನೆ, ಆರೋಗ್ಯ ಮತ್ತು ನೈರ್ಮಲ್ಯ, ಹಿಂದಿ ಪ್ರಚಾರ, ಚರಕ ಬಳಕೆ, ಗೋ ಸಂರಕ್ಷಣೆ, ಖಾದಿ, ಗ್ರಾಮೋದ್ಯೋಗ ಮುಂತಾದವು ರಚನಾತ್ಮಕ ಕಾರ್ಯಗಳಲ್ಲಿ ಸೇರಿದ್ದವು.[2]

**ಹರಿಜನೋದ್ಧಾರ ಕಾರ್ಯಗಳು**

ಗಾಂಧೀಜಿಯವರ ರಚನಾತ್ಮಕ ಕಾರ್ಯಕ್ರಮಗಳಲ್ಲಿ ಅಸ್ಪೃಶ್ಯತಾ ನಿವಾರಣೆ ಅಥವಾ ಹರಿಜನೋದ್ಧಾರ ಬಹು ಪ್ರಮುಖವಾದ ಅಂಶ. ಅಸ್ಪೃಶ್ಯತೆ ಎಂಬುದು ಭಾರತೀಯ ಸಮಾಜಕ್ಕಂಟಿದ ಬಹುದೊಡ್ಡ ಶಾಪ. ಇದು ಮನುಷ್ಯನನ್ನು ಜಾತಿಯ ಆಧಾರದ ಮೇಲೆ ಮೇಲು–ಕೀಳೆಂಬ ಭಾವದಿಂದ ನೋಡುತ್ತದೆ. ಅಸ್ಪೃಶ್ಯ ಎನ್ನುವ ಪದದ ಮೂಲ ಸ್ಪರ್ಶ. ಅಂದರೆ ಮುಟ್ಟುವುದು, ಸ್ಪೃಶ್ಯ ಎಂದರೆ ಮುಟ್ಟಬಹುದಾದದ್ದು ಮತ್ತು ಅಸ್ಪೃಶ್ಯ ಎಂದರೆ ಮುಟ್ಟಲಾಗದ್ದು ಅಥವಾ ಮುಟ್ಟಬಾರದ್ದು ಹಾಗೆಯೇ ಅಸ್ಪೃಶ್ಯತೆ ಎಂದರೆ ಏನನ್ನೋ, ಯಾರನ್ನೊ, ಮುಟ್ಟಬಾರದ್ದು ಎಂದು ವಿಧಿಸುವ ಆಚರಣೆ ಎಂದು ಅರ್ಥಮಾಡಿಕೊಂಡರೆ ಅಸ್ಪೃಶ್ಯತೆ ಪದದ ಸ್ಥೂಲವಾದ ಅರ್ಥ ಸಿಗುತ್ತದೆ.

ಬುದ್ಧ, ಬಸವಣ್ಣ, ಅಂಬೇಡ್ಕರ್ ಅವರಂತೆ ಗಾಂಧೀಜಿ ಸಹ ಅಸ್ಪೃಶ್ಯತಾ ನಿರ್ಮೂಲನೆಗಾಗಿ ತಮ್ಮ ಬದುಕಿನ ಬಹು ಭಾಗವನ್ನು ಮೀಸಲಾಗಿಸಿದವರು. ಭಾರತದ ಸ್ವಾತಂತ್ರ್ಯ ಚಳುವಳಿಯ ಜೊತೆ ಜೊತೆಗೆ ಹರಿಜನೋದ್ಧಾರವನ್ನು ಒಂದು ವ್ರತದಂತೆ ಪಾಲಿಸಿಕೊಂಡು ಬಂದವರು ಗಾಂಧೀಜಿ. ಅಸ್ಪೃಶ್ಯತೆ ಎಂಬುದು ಅನಾಗರಿಕ, ಅನೈತಿಕ ಮತ್ತು ಕ್ರೂರ ಪದ್ಧತಿ. ಆದ್ದರಿಂದ ಪ್ರತಿಯೊಬ್ಬ ಹಿಂದುವೂ ಅದರ ವಿರುದ್ಧ ಹೋರಾಡಲೇಬೇಕು. ಈ ಹೋರಾಟವು ಬರೀ ರಾಜಕೀಯ ಹೋರಾಟವಾಗಿರದೆ ಸಾಮಾಜಿಕ ಚಳುವಳಿ ಆಗಿರಬೇಕೆಂಬುದು ಗಾಂಧೀಜಿಯವರ ಅಭಿಪ್ರಾಯವಾಗಿತ್ತು.

ಗಾಂಧೀಜಿಯವರು ತನ್ನನ್ನು ಸನಾತನಿ ಎಂದೂ, ಸಂಪ್ರದಾಯಸ್ಥ ಹಿಂದೂ ಎಂದು ಕರೆದುಕೊಂಡರೂ ತಮ್ಮ 12ನೇ ವಯಸ್ಸಿನಿಂದಲೇ ಒಬ್ಬ ಮನುಷ್ಯ ಇನ್ನೊಬ್ಬ ಮನುಷ್ಯನನ್ನು ಏಕೆ ಮುಟ್ಟಬಾರದು ಎಂದು ಪ್ರಶ್ನಿಸುತ್ತಿದ್ದರು. ಬಾಲ್ಯದಲ್ಲಿ ತಮ್ಮ ಮನೆಯ ಶೌಚಾಲಯವನ್ನು ಸ್ವಚ್ಛಗೊಳಿಸಲು ಬರುತ್ತಿದ್ದ ಅಸ್ಪೃಶ್ಯನೊಬ್ಬನ ಒಡನಾಟಕ್ಕೆ ಆಕ್ಷೇಪಿಸುತ್ತಿದ್ದ, ಆತನನ್ನು ಮುಟ್ಟಿಸಿಕೊಂಡ

[2] ಶ್ರೀನಿವಾಸಮೂರ್ತಿ ಎ.ಪಿ. (1994). ಭಾರತದ ಸ್ವಾತಂತ್ರ್ಯ ಚಳುವಳಿ 1857–1947, ಬೆಂಗಳೂರು, ಪು.83.

ಸೂಚನೆ ದೊರೆತೊಡನೆ ತಮಗೆ ಸ್ನಾನ ಮಾಡಿಸಲು ಮುಂದಾಗುತ್ತಿದ್ದ ತಮ್ಮ ತಾಯಿಯ ವರ್ತನೆಯನ್ನು ಪರಿಹಾಸ್ಯ ಮಾಡುತ್ತಿದ್ದುದನ್ನು ಗಾಂಧಿ ತಮ್ಮ ಆತ್ಮಚರಿತ್ರೆಯಲ್ಲಿ ದಾಖಲಿಸಿದ್ದಾರೆ.[3]

ಗಾಂಧೀಜಿ ಭಾರತದಲ್ಲಿ ಸ್ಪೃಶ್ಯರಾಗಿದ್ದರೂ ವಿದೇಶಗಳಿಗೆ ತೆರಳಿದ್ದಾಗ ವರ್ಣಬೇಧದ ಕಹಿಯನ್ನುಂಡಿದ್ದರು. ವಕೀಲಿ ವೃತ್ತಿ ಸಲುವಾಗಿ ದಕ್ಷಿಣ ಆಫ್ರಿಕಾಗೆ ತೆರಳಿದ್ದ ಗಾಂಧೀಜಿಗೆ ಅಲ್ಲಿ ಅಸ್ಪೃಶ್ಯತೆಯ ಕರಾಳ ದರ್ಶನವಾಗಿತ್ತು. ಬಿಳಿಯರು ವಾಸಿಸುತ್ತಿದ್ದ ಕಾಲೋನಿಯ ರಸ್ತೆಯಿಂದ ಹೊರದೂಡಲ್ಪಟ್ಟಿದ್ದು, ಪಿಟ್ರೋರಿಯಾದ ಕ್ಷೌರಿಕ ಅಂಗಡಿಯಲ್ಲಿ ಗಾಂಧೀಜಿಗೆ ಕ್ಷೌರ ಮಾಡಲು ನಿರಾಕರಿಸಿದ್ದು, ರೈಲಿನ ಮೊದಲನೇ ದರ್ಜೆ ಬೋಗಿಯಿಂದ ಹೊರಹಾಕಿದ್ದು ಈ ಎಲ್ಲಾ ಘಟನೆಗಳು ಗಾಂಧೀಜಿ ತಾವೇ ಸ್ವತಃ ಅಸ್ಪೃಶ್ಯತೆಯನ್ನು ಅನುಭವಿಸಿದ್ದಕ್ಕೆ ಸ್ಪಷ್ಟ ನಿದರ್ಶನಗಳು.[4]

ಈ ಎಲ್ಲಾ ಅಂಶಗಳು ಗಾಂಧೀಜಿಯವರಲ್ಲಿ ಅಸ್ಪೃಶ್ಯತಾ ಆಚರಣೆಯ ಕ್ರೂರತೆಯನ್ನು ಪರಿಚಯಿಸುವುದರೊಂದಿಗೆ ಅದರ ಪರಿಹಾರಕ್ಕಾಗಿ ಚಿಂತಿಸಿ ಕಾರ್ಯೋನ್ಮುಖರಾಗುವಂತೆ ಮಾಡಿದವು. ಗಾಂಧೀಜಿ ಭಾರತಕ್ಕೆ ಮರಳಿದ ನಂತರವೂ ಅನೇಕ ಕಡೆ ಮಾಡಿದ ಭಾಷಣಗಳಲ್ಲಿ ಮತ್ತು ಬರೆದ ಲೇಖನಗಳಲ್ಲಿ ಅಸ್ಪೃಶ್ಯತೆಯನ್ನು ಒಂದು ಸಾಮಾಜಿಕ ಪಿಡುಗೆಂದೇ ಪರಿಗಣಿಸಿ ಅದರ ವಿರುದ್ಧ ಹೋರಾಟವನ್ನು ಸಂಘಟಿಸತೊಡಗಿದರು. ಅಸ್ಪೃಶ್ಯತೆಯನ್ನು ತೊಡೆದು ಹಾಕದ ಹೊರತು ನಾವು ಬ್ರಿಟಿಷರ ಗುಲಾಮಗಿರಿಗೆ ಅರ್ಹರಾಗಿದ್ದೇವೆಯೇ ವಿನಃ ಸ್ವರಾಜ್ಯಕ್ಕೆ ಯೋಗ್ಯರಲ್ಲ ಎಂದೂ ಘೋಷಿಸಿದರು.[5] ಗಾಂಧೀಜಿ ಗುಜರಾತಿನ ಅಹಮದಾಬಾದ್‌ನಲ್ಲಿ 1915 ಮೇ 25 ರಂದು ಸತ್ಯಾಗ್ರಹ ಆಶ್ರಮ ಸ್ಥಾಪಿಸಿದರು. ಕೆಲ ದಿನಗಳಲ್ಲೇ ಬಡ ಅಶ್ಪೃಶ್ಯ ಕುಟುಂಬವೊಂದು ಆಶ್ರಮದ ಆಶ್ರಯ ಹರಸಿ ಬಂದಿತು. ದುದಾಬಾಯ್, ಆತನ ಪತ್ನಿ ದಾನೀ ಬೆಹೆನ್, ಅವರ ಪುಟ್ಟ ಮಗಳು ಲಕ್ಷ್ಮಿ ಆ ಕುಟುಂಬದ ಸದಸ್ಯರು. ಇದು ಆಶ್ರಮಕ್ಕೆ ಬೆಂಬಲವಾಗಿದ್ದ ಸಂಪ್ರದಾಯಸ್ಥ ಹಿಂದೂಗಳಿಗೆ ಸಹಿಸಲಾಗಲಿಲ್ಲ. ಹೀಗಾಗಿ ಅವರು ಆಶ್ರಮಕ್ಕೆ ನೀಡುತ್ತಿದ್ದ ಹಣಕಾಸಿನ ನೆರವನ್ನು ನಿಲ್ಲಿಸಿಬಿಟ್ಟರು. ಇದರ ಜೊತೆಗೆ ಸಾಮಾಜಿಕ ಬಹಿಷ್ಕಾರದ ಎಚ್ಚರಿಕೆಯ ಸುದ್ದಿಯೂ ಬಂದಿತು. ಈ ಎಲ್ಲಾ ನಿಂದನೆಗಳ ನಡುವೆಯೂ ಗಾಂಧೀಜಿ ಧೃತಿಗೆಡೆದೆ ಹಠ ತೊಟ್ಟು ಆ ಕುಟುಂಬವನ್ನು ತಮ್ಮಲ್ಲಿಯೇ ಉಳಿಸಿಕೊಂಡರು. ಹಣಕಾಸಿನ ಕೊರತೆಯಿಂದಾಗಿ ಇನ್ನು ಆಶ್ರಮವನ್ನು ಮುನ್ನೆಡೆಸುವುದು ಕಷ್ಟ ಎಂದು ಸಹಾಯಕ ಎಚ್ಚರಿಸಿದರೂ, ಎದೆಗುಂದದ ಗಾಂಧೀಜಿ ಎಲ್ಲರೂ ಹರಿಜನ ಕೇರಿಗೆ ಹೋಗಿ

[3] ನಾಗಭೂಷಣ ಡಿ.ಎಸ್. (2017). ಇಂದಿಗೆ ಬೇಕಾದ ಗಾಂಧಿ. ಬೆಂಗಳೂರು, ಪು.47.

[4] ಸಂವಾದ ಮಾಸಪತ್ರಿಕೆ. (2012). ಬೆಂಗಳೂರು, ಜನವರಿ ಪು.10.

[5] ಪೂರ್ವೋಕ್ತ., ಅಡಿಟಿಪ್ಪಣಿ–3, ಪು.48.

ನೆಲೆಸೋಣ, ದೈಹಿಕ ಶ್ರಮದ ದುಡಿಮೆಯಿಂದ ಜೀವಿಸೋಣ ಎಂದರು[6] ಇದು ಅಸ್ಪೃಶ್ಯತೆ ನಿವಾರಣೆ ನಿಟ್ಟಿನಲ್ಲಿ ಗಾಂಧೀಜಿ ಎಂತಹುದೇ ಕ್ಲಿಷ್ಟ ಪರಿಸ್ಥಿತಿಯನ್ನು ಎದುರಿಸಬಲ್ಲ ಮನೋಸ್ಥಿತಿಯನ್ನು ಹೊಂದಿದ್ದರು ಎಂಬುದರ ಸ್ಪಷ್ಟ ನಿದರ್ಶನ ಎನಿಸದೆ ಇರದು.

**ಪೂನಾ ಒಪ್ಪಂದ ಮತ್ತು ನಂತರದ ಹರಿಜನೋದ್ಧಾರ ಕಾರ್ಯಕ್ರಮಗಳು**

2ನೇ ದುಂಡುಮೇಜಿನ ಸಮ್ಮೇಳನದಲ್ಲಿ ಭಾರತದ ಪ್ರಾಂತೀಯ ವಿಧಾನಸಭೆಗಳಿಗೆ ಪ್ರತಿನಿಧಿಗಳನ್ನು ಆಯ್ಕೆ ಮಾಡುವ ಪ್ರಕ್ರಿಯೆಗೆ ಸಂಬಂಧಿಸಿದಂತೆ ಚರ್ಚೆ ನಡೆಯುತ್ತಿತ್ತು. ಇಲ್ಲಿ ಅಂಬೇಡ್ಕರ್ ಮುಂದಿಟ್ಟಿದ್ದ ಪ್ರತ್ಯೇಕ ಮತದಾನ ಪದ್ಧತಿಯ ಪ್ರಸ್ತಾವವನ್ನು ಬ್ರಿಟಿಷರು ಅಂಗೀಕರಿಸಿದರು. ಬ್ರಿಟಿಷರ ಈ ನೀತಿಯನ್ನು ಪ್ರತಿಭಟಿಸಿ ಗಾಂಧೀಜಿ ತಾವಿದ್ದ ಪೂನಾದ ಯರವಾಡ ಜೈಲಿನಲ್ಲಿ ಸೆಪ್ಟೆಂಬರ್ 20 ರಂದು ಉಪವಾಸ ಸತ್ಯಾಗ್ರಹ ಕೈಗೊಂಡರು.[7] ಪೂನಾದಲ್ಲಿ ಗಾಂಧೀಜಿ ಕೈಗೊಂಡ ಉಪವಾಸ ದಲಿತ ವಿರೋಧಿ ಎಂದು ವಾದಿಸುವವರು ಅನೇಕರಿದ್ದರೂ ಅಸ್ಪೃಶ್ಯರು ಅಸ್ಪೃಶ್ಯರಾಗೇ ಉಳಿಯಬೇಕೆ ಎಂಬ ಪ್ರಶ್ನೆಯೆತ್ತಿದ್ದ ಗಾಂಧೀಜಿ ಅಮರಾಣಾಂತ ಉಪವಾಸ ಕೈಗೊಂಡಿದ್ದು ಅಸ್ಪೃಶ್ಯತಾ ನಿವಾರಣೆಗಾಗಿ ಎಂಬುದನ್ನು ಮನಗಾಣಬೇಕಿದೆ.

ಈ ಸಂದರ್ಭದಲ್ಲಿ ದೇಶದಲ್ಲಿ ಸಾಕಷ್ಟು ಸವರ್ಣೀಯರು ಗಾಂಧೀಜಿಯವರ ಆಶಯದಂತೆ ಅಸ್ಪೃಶ್ಯತಾ ನಿವಾರಣೆಗಾಗಿ ಮುಂದಾದರು. ಗಾಂಧೀಜಿ ನಿರಶನದ ಸುದ್ಧಿ ಹೊರಬಿದ್ದ ಸೆಪ್ಟೆಂಬರ್ 13ರಂದೇ ದಲಿತ ನೇತಾರ ರಾವ್ ಬಹದ್ದೂರ್ ಎಂ.ಸಿ. ರಾಜಾ ಪ್ರತ್ಯೇಕ ಮತಕ್ಷೇತ್ರಗಳ ರಾಜಕೀಯ ಪ್ರತ್ಯೇಕಿಕರಣದ ವಿರುದ್ಧ ಹೇಳಿಕೆ ಬಿಡುಗಡೆ ಮಾಡಿದರು. ಬಾಬುರಾಜೇಂದ್ರ ಪ್ರಸಾದ್ ನಿಮ್ನ ವರ್ಗಗಳಿಗೆ ದೇವಾಲಯ ಪ್ರವೇಶ, ಸಾರ್ವಜನಿಕ ಕೆರೆ ಬಾವಿಗಳ ಬಳಕೆ, ಶಾಲೆಗಳಲ್ಲಿ ಶಿಕ್ಷಣ, ಸಾರ್ವಜನಿಕ ರಸ್ತೆ, ಸ್ಥಳಗಳ ಬಳಕೆಗೆ ಅವಕಾಶ ಕಲ್ಪಿಸುವ ಮೂಲಕ ಹಿಂದೂಗಳು ಗಾಂಧೀಜಿಯವರ ಹೋರಾಟವನ್ನು ಸಾರ್ಥಕಗೊಳಿಸಬೇಕೆಂದು ಕರೆ ಕೊಟ್ಟರು.

ಗಾಂಧೀಜಿ ಉಪವಾಸ ಕೈಗೊಂಡ 20ರಂದು ದೇಶದಾದ್ಯಂತ ಲಕ್ಷಾಂತರ ಭಾರತೀಯರು ಉಪವಾಸ ಹಾಗೂ ಪ್ರಾರ್ಥನೆಗಳ ಮೂಲಕ ಗಾಂಧೀಜಿ ನಡೆಗೆ ಬೆಂಬಲ ನೀಡಿದರು. ಶಾಂತಿನಿಕೇತನದಲ್ಲಿ ಟ್ಯಾಗೂರರು ಸೇರಿದಂತೆ ವಿಶ್ವಭಾರತಿಯ ಸಕಲ ಸಮಸ್ತರೂ ಉಪವಾಸ ಕುಳಿತರು. ಅಲ್ಲಿ ಕವಿ ರವೀಂದ್ರರು ಗಾಂಧೀಜಿ ನಿರಶನವನ್ನು ಸನಾತನ ಸಾಮಾಜಿಕ ಅಪರಾಧವನ್ನು ಕೊನೆಗಾಣಿಸಲು ಗಾಂಧೀಜಿ ರಾಷ್ಟ್ರದ ಮುಂದೆ ಒಡ್ಡಿದ ಸವಾಲಿದು ಎಂದು ಬಣ್ಣಿಸಿದರು. ರವೀಂದ್ರರ

[6] ಗೊರೂರು ರಾಮಸ್ವಾಮಿ ಅಯ್ಯಂಗಾರ್. (1995). ಮೋ.ಕ.ಗಾಂಧಿ ಆತ್ಮಕಥೆ ಅಥವಾ ಸತ್ಯಾನ್ವೇಷಣೆ, ಅಹಮದಾಬಾದ್. ಪು.415–416.

[7] ಜವರೇಗೌಡ. ದೇ. (1996). ಕ್ರಾಂತಿಕಾರ ಡಾ. ಅಂಬೇಡ್ಕರ್, ಬೆಂಗಳೂರು, ಪು.95–97.

ಮಾರ್ಗದರ್ಶನದಲ್ಲಿ ವಿಶ್ವಭಾರತಿ ಸುತ್ತಮುತ್ತಲ ಪರಿಸರದಲ್ಲಿ ತಳಜಾತಿಗಳ ಹಿತಾಸಕ್ತಿಗಾಗಿ ದುಡಿಯಲೆಂದು ವಿಶ್ವವಿದ್ಯಾಲಯದ ಶಿಕ್ಷಕರು ಹಾಗೂ ವಿದ್ಯಾರ್ಥಿಗಳ ಒಂದು ಪಡೆಯೇ ಸಜ್ಜಾಯಿತು.

ದೇಶದಾದ್ಯಂತ ಎಲ್ಲೆಡೆಯಿಂದ ದೇವಸ್ಥಾನಗಳು, ಬಾವಿಗಳು ಮತ್ತು ಸಾರ್ವಜನಿಕ ಸ್ಥಳಗಳನ್ನು ಅಸ್ಪೃಶ್ಯರಿಗೆ ಮುಕ್ತಗೊಳಿಸುವ ಸುದ್ದಿಗಳು ಒಂದೇ ಸಮ ಹರಿದು ಬರತೊಡಗಿದವು. ಆರಂಭದಲ್ಲೇ ದೆಹಲಿಯ ದೇವಸ್ಥಾನಗಳು, ಕಲ್ಕತ್ತೆಯ ಕಾಳೀಘಾಟ್ ದೇವಾಲಯ ಮತ್ತು ಬನಾರಸ್ಸಿನ ರಾಮಮಂದಿರಗಳನ್ನು ದಲಿತರ ಪ್ರವೇಶಕ್ಕೆ ಮುಕ್ತಗೊಳಿಲಾಯಿತು. ಮುಂಬಯಿಯಲ್ಲಿ ಗಾಂಧಿ ಸೇವಾಸೇನೆಯು ಕೆಲ ಪ್ರಮುಖ ದೇವಾಲಯಗಳ ದ್ವಾರ ತೆರೆಸಿತು. ಹಾಗೆ 20 ರಿಂದ 24ರವರೆಗೆ ನಡೆದ ಉಪವಾಸದುದ್ದಕ್ಕೂ ದೇಶದಾದ್ಯಂತ ಸಾವಿರಾರು ದೇವಸ್ಥಾನಗಳನ್ನು ದಲಿತರ ಪ್ರವೇಶಕ್ಕೆ ಮುಕ್ತಗೊಳಿಸುವ ಸ್ವಯಂಪ್ರೇರಿತ ಆಂದೋಲನವೇ ನಡೆದು ಹೋಯಿತು. ದೇಶದ ನಾಯಕರ ಪ್ರಯತ್ನದಿಂದ 24ನೇ ಸೆಪ್ಟೆಂಬರ್ 1934 ರಂದು ಯರವಾಡ ಜೈಲಿನಲ್ಲಿ ಗಾಂಧೀಜಿಯವರನ್ನು ಡಾ.ಅಂಬೇಡ್ಕರ್ ಭೇಟಿ ಮಾಡಿ ಚರ್ಚಿಸಿದ ನಂತರ ಉಪವಾಸ ನಿರಶನವನ್ನು ಅಂತ್ಯಗೊಳಿಸಿದರು. ತದನಂತರ ಸೆಪ್ಟೆಂಬರ್ 27 ರಿಂದ ಅಕ್ಟೋಬರ್ 2 ರವರೆಗೆ ಇಡೀ ದೇಶ ಅಸ್ಪೃಶ್ಯತಾ ವಿರೋಧಿ ಸಪ್ತಾಹವನ್ನು ಆಚರಿಸಿತು. ರವೀಂದ್ರನಾಥ ಟ್ಯಾಗೋರ್ 27 ರಂದು ಶಾಂತಿನಿಕೇತನದಲ್ಲಿ ನಡೆದ ಸಭೆಯಲ್ಲಿ "ಜನ್ಮದ ಆಕಸ್ಮಿಕ ಒಂದರಿಂದಲೇ (ಅಸ್ಪೃಶ್ಯರೆಂಬ) ಕಳಂಕ ಅಂಟಿಸಿಕೊಂಡವರ ಬಾಗಿದ ಬೆನ್ನೇರಿದ ಅವಮಾನದ ಹೊರೆಯನ್ನು ನೀಗಿಸುವ ಮಹಾತ್ಮರ ಉದಾತ್ತ ಕೈಂಕರ್ಯದಲ್ಲಿ ನಾವೆಲ್ಲ ಕೈ ಜೋಡಿಸೋಣ ಆ ಮೂಲಕ ನೈತಿಕ ಗುಲಾಮಗಿರಿ ಸಂಕೋಲೆಗಳಿಂದ ಭಾರತವನ್ನು ಬಿಡುಗಡೆಗೊಳಿಸುವುದಷ್ಟೇ ಅಲ್ಲ ಮನುಕುಲಕ್ಕೇ ಹೊಸ ಹಾದಿ ತೋರೋಣ" [8] ಎಂದು ಸಭೆಯನ್ನುದ್ದೇಶಿಸಿ ಮಾತನಾಡಿದರು.

ಭಾರತೀಯ ಸಮಾಜವನ್ನು ಒಗ್ಗೂಡಿಸಲು ಕಂಕಣಬದ್ಧರಾಗಿದ್ದ ಗಾಂಧೀಜಿ ಅದಕ್ಕೆ ತೊಡಕಾಗಿದ್ದ ಅಸ್ಪೃಶ್ಯತೆಯನ್ನು ನಿವಾರಿಸಲು ಪ್ರಯತ್ನಿಸಿದರು. ಅಸ್ಪೃಶ್ಯತೆಯೆಂಬುದು ಅಸ್ಪೃಶ್ಯರಿಗಂಟಿದ ಕಳಂಕವಲ್ಲ. ಸಂಪ್ರದಾಯಸ್ಥ ಹಿಂದೂಧರ್ಮಕ್ಕೆ ಅಂಟಿದ ಕಳಂಕ ಎಂದು ಸಾರಿ ಸಮಾಜದ ಶುದ್ಧೀಕರಣಕ್ಕಾಗಿ ಅಂದರೆ ಸವರ್ಣೀಯರ ಮನಃಪರಿವರ್ತನೆಗಾಗಿ ಸುಧಾರಣಾವಾದಿ ಹೆಜ್ಜೆ ಹಾಕಿದರು. 'ಭಂಗಿ' ಎಂದು ಕರೆಯಲ್ಪಡುತ್ತಿದ್ದ ಅಸ್ಪೃಶ್ಯರಿಗೆ 'ಹರಿಜನ'ರೆಂದು ನಾಮಕರಣ ಮಾಡಿದರು. ಪ್ರಪಂಚದ ದೀನ–ಹೀನ ಮನುಷ್ಯ ದೇವರಿಗೆ ಪ್ರಿಯವಾಗಿರುತ್ತಾನಾದುದರಿಂದ ಎಲ್ಲಾ ಬಡವ ಭಂಗಿಗಳು ವಾಸ್ತವವಾಗಿ ಹರಿಯ ಜನರು 'ಹರಿಜನರು' ಅಂದರು. ಗಾಂಧೀಜಿ ಉಪವಾಸ

[8] ಪ್ರಜಾವಾಣಿ. (4ನೇ ಡಿಸೆಂಬರ್, 2011). ಸಾಪ್ತಾಹಿಕ ಪುರವಣಿ, ಬೆಂಗಳೂರು. ಪು.3.

ಆರಂಭಿಸುವ ಒಂದು ದಿನ ಮೊದಲು "ನನ್ನ ಪ್ರಾಣವನ್ನು ಮುಡಿಪಿಟ್ಟಾದರೂ ನಾನು ಈ ಅಸ್ಪೃಶ್ಯತೆಯ ಕಳಂಕವನ್ನು ದೂರಗೊಳಿಸಬಯಸುತ್ತೇನೆ. ನಾನು ಇನ್ನೇನಾದರೂ ಮಾಡಲು ಸಾಧ್ಯವಿದ್ದರೆ ಅದೂ ಮಾಡುತ್ತಿದ್ದೆ. ಆದರೆ ನನ್ನ ಬಳಿ ಪ್ರಾಣ ಬಿಟ್ಟರೆ ಮತ್ತೇನಿಲ್ಲ" ಎಂದು ಬಹಳ ವಿಷಾದ ವ್ಯಕ್ತಪಡಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

ಪೂನಾ ಒಪ್ಪಂದದ ಬಳಿಕ ಗಾಂಧೀಜಿ ಹರಿಜನೋದ್ಧಾರವನ್ನು ಕಾಂಗ್ರೆಸ್‌ನ ಪ್ರಣಾಳಿಕೆಯಲ್ಲಿ ಸೇರಿಸಿದರು. 1932ರಲ್ಲಿ 'ಹರಿಜನ ಸೇವಾ ಸಂಘ'ವನ್ನು ಸ್ಥಾಪಿಸಿದರು. ಇದರ ಅಧ್ಯಕ್ಷರಾಗಿ ಜಿ.ಡಿ. ಬಿರ್ಲಾ ಮತ್ತು ಕಾರ್ಯದರ್ಶಿಯಾಗಿ ಥಕ್ಕರ್ ಬಾಪಾ ಆಯ್ಕೆಯಾದರು.[9] ದೇಶದ ವಿವಿಧ ಭಾಗಗಳಲ್ಲಿ ಇದರ ಶಾಖೆಗಳು ಪ್ರಾರಂಭವಾದವು. ಅಸ್ಪೃಶ್ಯತಾ ನಿವಾರಣೆ ಹರಿಜನ ಸೇವಕ ಸಂಘದ ಉದ್ದೇಶವಾಗಿದ್ದು, ಆಯಾಯ ಪ್ರಾಂತ್ಯದ ಹರಿಜನರ ಕುಂದು ಕೊರತೆಗಳ ನಿವಾರಣೆ, ಅಸ್ಪೃಶ್ಯರ ಮೇಲಿನ ದೌರ್ಜನ್ಯಗಳ ತಡೆ, ಸಾರ್ವಜನಿಕ ಬಾವಿ, ಕೆರೆ, ದೇವಾಲಯ, ಶಾಲೆಗಳಿಗೆ ಪ್ರವೇಶ ಪಡೆಯುವುದು ಮುಂತಾದ ಅಂಶಗಳನ್ನು ಹೊಂದಿತ್ತು. ಜನರಲ್ಲಿ ಅಸ್ಪೃಶ್ಯರ ಬಗ್ಗೆ ಮನಃ ಪರಿವರ್ತಿಸುವ ಸಲುವಾಗಿ ಗಾಂಧೀಜಿ 1933 ರಲ್ಲಿ ಹರಿಜನ ಸಾಪ್ತಾಹಿಕವನ್ನಾರಂಭಿಸಿದರು. ಇಂಗ್ಲೀಷಿನಲ್ಲಿ 'ಹರಿಜನ', ಗುಜರಾತಿಯಲ್ಲಿ 'ಹರಿಜನಬಂಧು' ಹಿಂದಿಯಲ್ಲಿ 'ಹರಿಜನ ಸೇವಕ' ಪ್ರಕಟವಾದವು. ಇಷ್ಟಕ್ಕೆ ಹರಿಜನ ಸೇವಾಕಾರ್ಯ ಕ್ರಿಯಾಶೀಲವಾಗದೆಂದು 8 ಮೇ 1933 ರಂದು 21 ದಿನಗಳ ಕಾಲ ಉಪವಾಸ ಕೈಗೊಳ್ಳಲು ನಿರ್ಧರಿಸಿದರು. ಈ ಉಪವಾಸ ಆತ್ಮಶುದ್ಧಿಗಾಗಿ ಕೈಗೊಂಡ ಕ್ರಮವೇ ಹೊರತು ಯಾವುದೇ ಅಧಿಕಾರ, ಜಾತಿ, ವರ್ಗವನ್ನು ವಿರೋಧಿಸುವುದಾಗಿರಲಿಲ್ಲ.

ಗಾಂಧೀಜಿ ಅಸ್ಪೃಶ್ಯತೆ ತೊಡೆದು ಹಾಕುವ ಹಾಗೂ ಅದಕ್ಕಾಗಿ ಅಗತ್ಯ ನಿಧಿ ಸಂಗ್ರಹಿಸುವ ಸಲುವಾಗಿ ದೇಶದಾದ್ಯಂತ ಪ್ರವಾಸ ಕೈಗೊಂಡರು. ಗಾಂಧೀಜಿಯವರ ದರ್ಶನ ಹಾಗೂ ಭಾಷಣದಿಂದ ಪ್ರಭಾವಿತರಾದ ಜನರಿಂದ ಹಣಕಾಸಿನ ಮಹಾಪೂರವೇ ಹರಿದುಬಂತು. ಮಹಿಳೆಯರು ತಮ್ಮ ಮೈಮೇಲಿದ್ದ ಚಿನ್ನದ ಆಭರಣಗಳನ್ನು ದಾನ ಮಾಡಿದರು. 12500 ಮೈಲು ದೂರದ ಈ ಹರಿಜನ ಯಾತ್ರೆಯಲ್ಲಿ ಆರು ಲಕ್ಷ ರೂಗಳನ್ನು ಸಂಗ್ರಹಿಸಿದರು. ಕೋಟ್ಯಾಂತರ ಸವರ್ಣೀಯ ಹಿಂದೂಗಳ ಹೃದಯ ಪರಿವರ್ತನೆ ಮಾಡಿದರು.[10]

[9] ವರ್ಮ ಬಿ.ಆರ್. & ಎಸ್.ಆರ್. ಭಕ್ಷಿ (ಸಂ.).(2005). ಗಾಂಧಿ ಅಂಡ್ ಸತ್ಯಾಗ್ರಹ ಅಂಡ್ ಹಿಸ್ ಟೆಕ್ನಿಕ್ಸ್, ನ್ಯೂಡೆಲ್ಲಿ. ಪು.210–211.

[10] ಮೂಲ: ಸುಮಿತ್ರಾಗಾಂಧೀ ಕುಲಕರ್ಣಿ, ಬಿ.ವೈ. ಲಲಿತಾಂಬ (ಅನು). (2010). ಮಹಾತ್ಮಗಾಂಧಿ ನನ್ನ ತಾತ. ಭಾಗ–2, ಬೆಂಗಳೂರು ಪು.194–196.

ಆರಂಭದಲ್ಲಿ ಗಾಂಧೀಜಿಯವರಲ್ಲಿ ಜಾತಿ ವ್ಯವಸ್ಥೆಯ ಬಗ್ಗೆ ಗೊಂದಲಗಳಿದ್ದವು. ಒಂದು ಹಂತದಲ್ಲಿ ಕರ್ಮಠ ಜಾತಿವಾದಿಯಂತೆ ಕಾಣಿಸುವ ಗಾಂಧೀಜಿ ನಂತರ ಅಪ್ಪಟ ಜಾತ್ಯಾತೀತ ವ್ಯಕ್ತಿಯಾಗಿ ಮಾರ್ಪಟ್ಟರು. ಕೊನೆಗೆ ತಾನು ಅಂತರ್ಜಾತಿ ವಿವಾಹಗಳಿಗೆ ಮಾತ್ರ ಹೋಗುವುದಾಗಿ ತಿರ್ಮಾನ ಕೈಗೊಂಡರು. ಜೂನ್ 16, 1933 ರಂದು ತಮ್ಮ ಕೊನೆಯ ಮಗ ದೇವದಾಸ್ ಗಾಂಧಿಯ ಮದುವೆಯನ್ನು ರಾಜಾಗೋಪಾಲಚಾರಿ ಮಗಳ ಜೊತೆ ಸರಳವಾಗಿ ಮಾಡಿದರು. ಇದೊಂದು ಅಂತರ್ಜಾತಿ ವಿವಾಹವಾಗಿತ್ತು. ಇಂದಿರಾ–ಫಿರೋಜ್ ಮದುವೆಯ ಸಾರಥ್ಯ ವಹಿಸಿದರು. ನಂತರದಲ್ಲಿ ಅಂತರ ಜಾತಿಯ ಮದುವೆಯಲ್ಲೂ ಒಬ್ಬರು ಹರಿಜನರಿದ್ದರೆ ಮಾತ್ರ ತಾವು ಹೋಗುವುದು ಎಂಬ ಷರತ್ತು ಹಾಕತೊಡಗಿದರು. ಇವೆಲ್ಲವೂ ಗಾಂಧೀಜಿ ತಮ್ಮ ಆತ್ಮಕಥೆಯಲ್ಲಿ ಹೇಳಿಕೊಂಡಿರುವಂತೆ ತಮ್ಮನ್ನು ಪ್ರತಿನಿತ್ಯವೂ ಆತ್ಮ ಪರಿಷ್ಕರಣೆಗೆ ಒಳಪಡಿಸಿ ಕೊಳ್ಳುತ್ತಿದ್ದರು ಎಂಬುದಕ್ಕೆ ಸಾಕ್ಷಿಯೆನಿಸಿದೆ.

**ಕರ್ನಾಟಕದಲ್ಲಿ ಹರಿಜನೋದ್ಧಾರ ಕಾರ್ಯಕ್ರಮಗಳು**

ಕರ್ನಾಟಕದಲ್ಲಿ ಗಾಂಧೀಜಿಯವರ ಆಗಮನಕ್ಕಿಂತ ಮೊದಲೇ ಖಾದಿ, ಹರಿಜನೋದ್ಧಾರದಂತಹ ರಚನಾತ್ಮಕ ಕಾರ್ಯಗಳ ಬಗ್ಗೆ ಇಲ್ಲಿನ ಸುಧಾರಣಾವಾದಿಗಳು ಉತ್ಸುಕರಾಗಿದ್ದರು. ಕರ್ನಾಟಕದ ಹರಿಜನೋದ್ಧಾರಕರಲ್ಲಿ ಕುದ್ಮಲ್ ರಂಗರಾಯರು ಮಹಾ ದೇಶಪ್ರೇಮಿಯಾಗಿದ್ದು ಇವರು 'ದೀನೋದ್ಧರಣಂ ದೇಶೋದ್ಧರಣಂ' ದೀನ ದಲಿತರ ಉದ್ಧಾರವೇ ದೇಶದ ಉದ್ಧಾರ ಎಂಬ ತತ್ವದಲ್ಲಿ ನಂಬಿಕೆ ಇಟ್ಟಿದ್ದರು. ಈ ಸಲುವಾಗಿ 1897ರಲ್ಲಿ 'ಮಂಗಳೂರಿನಲ್ಲಿ ಡಿಪ್ರೆಸ್ಡ್ ಕ್ಲಾಸಸ್ ಮಿಷನ್' ಎಂಬ ಸಂಸ್ಥೆ ತೆರೆದರು. ಶಾಲೆಗೆ ಬರುವ ದಲಿತ ಮಕ್ಕಳಿಗೆ ಪ್ರೋತ್ಸಾಹ ಧನ ನೀಡುತ್ತಿದ್ದರು. ಮುಂದೆ ಈ ಸಂಸ್ಥೆಯ ಕಾರ್ಯದರ್ಶಿಯಾಗಿದ್ದ ಕಾರ್ನಾಡ್ ಸದಾಶಿವರಾಯರು ಮಂಗಳೂರಿನ ದೇರೆಬೈಲು ಗ್ರಾಮದಲ್ಲಿ ಪಂಚಮರಿಗಾಗಿ ಎರಡು ಕಾಲೋನಿಗಳನ್ನು ನಿರ್ಮಿಸಿಕೊಟ್ಟು ಅವರ ಅಭಿವೃದ್ಧಿಗೆ ಶ್ರಮಿಸಿದರು. 1915ರಲ್ಲಿ ಬೆಂಗಳೂರಿನಲ್ಲಿ ಜಿ.ಆರ್. ಗೋಪಾಲಸ್ವಾಮಿ ಅಯ್ಯರ್ 'ಸಿವಿಕ್ ಅಸೋಸಿಯೇಷನ್' ಎಂಬ ಸಂಸ್ಥೆಯನ್ನು ಸ್ಥಾಪಿಸಿ ಈ ಸಂಸ್ಥೆಯ ಮೂಲಕ ಹರಿಜನರ ಏಳಿಗೆಗೆ ಶ್ರಮಿಸಿದರು.[11]

ಹಿಂದೂ ಧರ್ಮದಲ್ಲಿದ್ದ ಜಾತಿಬೇಧ ಕಟ್ಟುಪಾಡುಗಳಿಂದ ಬೇಸತ್ತ ಅಸ್ಪೃಶ್ಯರು ಕ್ರೈಸ್ತ ಧರ್ಮಕ್ಕೆ ಮತಾಂತರಗೊಳ್ಳಲಾರಂಭಿಸಿದರು. ಇದಕ್ಕೆ ಅಂದಿನ ಬ್ರಿಟಿಷ್ ಸರ್ಕಾರವೇ ಬೆನ್ನೆಲುಬಾಗಿ ನಿಂತಿತು. ಇಂತಹ ಸಂದಿಗ್ಧತೆಯಲ್ಲಿ ತಗಡೂರು ರಾಮಚಂದ್ರರಾಯರು ಕ್ರೈಸ್ತಪಾದಿಗಳ ಮತಾಂತರದ ಹಾವಳಿಯನ್ನು ತಡೆಗಟ್ಟಿ ಅಸ್ಪೃಶ್ಯತೆಯನ್ನು ನಿರ್ಮೂಲನ ಮಾಡಿ ಅವರ ಸ್ಥಿತಿಗತಿಗಳನ್ನು

[11] ಮೂರ್ತಿ ಟಿ.ಎಚ್: ಜಿ.ಆರ್. ಗೋಪಾಲಸ್ವಾಮಿ ಅಯ್ಯರ್. (2008). ಗಾಂಧಿ ಉಪನ್ಯಾಸ ಮಾಲೆ, ಬೆಂಗಳೂರು. ಪು.10.

ಸುಧಾರಿಸಲು ಮುಂದಾದರು. ಸವರ್ಣೀಯರು ಹರಿಜನರ ಕೇರಿಗಳಲ್ಲಿ ಓಡಾಡಿದರೆ, ಹರಿಜನರ ಮನೆಗಳಿಗೆ ಬಂದರೆ ಇವರಿಗೆ ಏನಾದರೂ ತೊಂದರೆಗಳು ಆಗುತ್ತವೆಂಬ ಭೀತಿ ಅಥವಾ ಮೂಢನಂಬಿಕೆ ಅಸ್ಪೃಶ್ಯರಲ್ಲಿತ್ತು. ಇಂತಹ ಸನ್ನಿವೇಶದಲ್ಲಿ ತಗಡೂರು ರಾಮಚಂದ್ರರಾಯರು ಹರಿಜನರ ಕಾಲೋನಿಗಳಲ್ಲಿ ಓಡಾಡಿ ಅವರ ಮನೆಯ ಜಗಲಿ ಮೇಲೆ ಕುಳಿತು ಅವರ ಚಾಪೆ, ಕಂಬಳಿ, ಇತ್ಯಾದಿಗಳನ್ನು ಮುಟ್ಟುವ ಮೂಲಕ ಇದರಿಂದ ಯಾವುದೇ ತೊಂದರೆಯಾಗುವುದಿಲ್ಲವೆಂಬುದನ್ನು ಸಾಬೀತುಪಡಿಸಿ ಅವರ ಮನದಲ್ಲಿದ್ದ ಭೀತಿಯನ್ನು ದೂರ ಮಾಡಿದರು. ಸುತ್ತಮುತ್ತಲ ಹಳ್ಳಿಗಳಿಗೆ ಭೇಟಿ ನೀಡಿದ ರಾಮಚಂದ್ರರಾಯರು ಹರಿಜನರೊಂದಿಗೆ ಬೇಧ ಭಾವ ತೋರದೆ ಸೌಹಾರ್ದತೆಯಿಂದ ಇರುವಂತೆ ಕರೆ ನೀಡಿದರು. ಕುರುಗುಂದ ಗ್ರಾಮದಲ್ಲಿ ಸಭೆಯೊಂದನ್ನು ಏರ್ಪಾಟು ಮಾಡಿ ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡಿದ್ದ ಹಿಂದೂಗಳನ್ನು ಮತ್ತೆ ಮೂಲ ಧರ್ಮಕ್ಕೆ ಕರೆತಂದರು. ಮುಂದೆ ಇದೇ ಹರಿಜನ ಕಾಲೋನಿಯಲ್ಲಿ ಗಣಪತಿ ದೇವಾಲಯವನ್ನು ಸ್ಥಾಪಿಸಿದರು.[12]

ರಾಮಚಂದ್ರರಾಯರು ಕಣಿಯರ ಜನಾಂಗದವರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಕಾವೇರಿ ಕಪಿಲ ಸಂಗಮದಲ್ಲಿ ಎಂ. ವೆಂಕಟಕೃಷ್ಣಯ್ಯ ಅವರ ಅಧ್ಯಕ್ಷತೆಯಲ್ಲಿ ಸಮ್ಮೇಳನವೊಂದನ್ನು ಏರ್ಪಡಿಸಿ ಅವರನ್ನು ಸಂಘಟಿಸಿದರು. 'ತಗಡೂರು ಗ್ರಾಮ ರಕ್ಷಕ' ಸಭೆಯನ್ನು ಸಂಘಟಿಸಿದರು.[13] 1926 ಮೇ 26 ರಂದು ತಗಡೂರಿನಲ್ಲಿ ಕಣಿಯರು ಊರಿನ ಮುಖ್ಯ ಬೀದಿಗಳಲ್ಲಿ ಭಜನೆಗಳೊಂದಿಗೆ ದೇವಾಲಯ ಪ್ರವೇಶ ಮಾಡಲು ಅನುವು ಮಾಡಿಕೊಟ್ಟರು. ಈ ಎಲ್ಲಾ ಕಾರ್ಯಗಳಿಂದಾಗಿ ಕಣಿಯರು ಜಾಗೃತಗೊಂಡು ಸಾಮಾಜಿಕ ಸ್ಥಾನ ಪಡೆಯಲು ಸಾಧ್ಯವಾಯಿತು.

1933ರ ವೇಳೆಗಾಗಲೇ ಕರ್ನಾಟಕದ ಬಿಜಾಪುರ, ಬೆಳಗಾಂ, ಮಂಗಳೂರು, ಕಾರವಾರ, ಕೊಡಗು, ಬಳ್ಳಾರಿ ಮುಂತಾದ ಸ್ಥಳಗಳಲ್ಲಿ ಹರಿಜನ ಸೇವಾಸಂಘದ ಶಾಖೆಗಳು ಪ್ರಾರಂಭವಾಗಿದ್ದವು. ಹುಬ್ಬಳ್ಳಿ ಇದರ ಕೇಂದ್ರ ಕಛೇರಿಯಾಗಿತ್ತು. 'ಕರ್ನಾಟಕ ಹರಿಜನ ಸೇವಾ ಸಂಘ'ದ ಅಧ್ಯಕ್ಷರಾಗಿ ವೀರಣ್ಣಗೌಡ ಪಾಟೀಲ್ ಮತ್ತು ಕಾರ್ಯದರ್ಶಿಗಳಾಗಿ ಕಲ್ಲನಗೌಡ ಪಾಟೀಲ್ ಹರಿಜನೋದ್ಧಾರ ಕಾರ್ಯಚಟುವಟಿಕೆಗಳಲ್ಲಿ ತೊಡಗಿದ್ದರು.[14] ಮೈಸೂರು ರಾಜಕೀಯಸ್ಥರು ಅಸ್ಪೃಶ್ಯತಾ ನಿಷೇಧದ ಬಗ್ಗೆ ಮಾತನಾಡತೊಡಗಿದರು. ಆದರೆ ಈ ಮಾತುಗಳು ಪ್ರತಿನಿಧಿ ಸಭೆಗಳಲ್ಲಿ ಕೇಳಿ ಬರುತ್ತಿದ್ದವು. ಮೈಸೂರು ಸಂಸ್ಥಾನದಲ್ಲಿ ಮೈಸೂರು ಅಸ್ಪೃಶ್ಯತಾ ವಿರೋಧಿ ಸಂಘ (Mysore

---

[12] ನಾಗರತ್ನಮ್ಮ ಎಸ್. (2009) ಕರ್ನಾಟಕದಲ್ಲಿ ಅಸಹಕಾರ ಮತ್ತು ನಾಗರೀಕ ಕಾನೂನು ಭಂಗ ಚಳುವಳಿ, ಬೆಂಗಳೂರು. ಪು.64–65.

[13] ಮೇಲಿನದೆ.

[14] ಹಾಲಪ್ಪ ಜಿ.ಎಸ್. (1968) ಫ್ರೀಡಂ ಮೂವೆಮೆಂಟ್ ಇನ್ ಕರ್ನಾಟಕ, ಸಂಪುಟ–2, ಮೈಸೂರು. ಪು.403.

State Anti Untouchability League) ಸ್ಥಾಪನೆಗೊಂಡಿತು. ಇದರ ಪ್ರಥಮ ವಾರ್ಷಿಕ ಅಧಿವೇಶನ 18 ಡಿಸೆಂಬರ್ 1932 ರಂದು ಮೈಸೂರಿನಲ್ಲಿ ಜರುಗಿತು. ವಿ.ಪಿ. ಮಾಧವರಾವ್ ಇದರ ಅಧ್ಯಕ್ಷತೆ ವಹಿಸಿದ್ದರು. ಅಸ್ಪೃಶ್ಯರಿಗೆ ದೇವಾಲಯ, ಸಾರ್ವಜನಿಕ ಕೆರೆ, ಕಟ್ಟೆ, ಬಾವಿ ಮತ್ತು ಶಾಲೆಗಳಿಗೆ ಮುಕ್ತ ಪ್ರವೇಶ ನೀಡುವುದು ಹಾಗೂ ಅಸ್ಪೃಶ್ಯರ ಆರ್ಥಿಕ ಸ್ಥಿತಿ ಸುಧಾರಣೆ ಸಲುವಾಗಿ ಸರ್ಕಾರ ಉಚಿತ ಭೂಮಿ ನೀಡಬೇಕೆಂದು ನಿರ್ಣಯಗಳನ್ನು ತೆಗೆದುಕೊಂಡಿತು.[15]

ಕೊಡಗಿನ ಗೋಣಿಕೊಪ್ಪ ಬಳಿ 1932ರಲ್ಲಿ 'ದೀನಾ ಸೇವಾಶ್ರಮ' ಪ್ರಾರಂಭವಾಯಿತು. ಅರಮೇರಿ ಮತ್ತು ಚೆನ್ನಯ್ಯನ ಕೋಟೆಗಳಲ್ಲಿ ಹರಿಜನರಿಗಾಗಿ ಶಾಲೆಗಳನ್ನು ತೆರೆಯಲಾಯಿತು. ಈ ಎಲ್ಲಾ ಹರಿಜನಾಭಿವೃದ್ಧಿ ಕಾರ್ಯಗಳು ಕರ್ನಾಟಕ ಹರಿಜನ ಸೇವಕ ಸಂಘದ ಬೆಂಬಲಗಳಿಂದಲೇ ನಡೆದವು. ದೀನಾ ಸೇವಾಶ್ರಮದಲ್ಲಿ ಮಲ್ಲೇಲಗಡ ಚಂಗಪ್ಪ, ಹರಿಜನ ಯುವತಿಯರಿಗೆ ಟೈಲರಿಂಗ್ ಮುಂತಾದ ಉದ್ಯೋಗ ಕಲಿಕೆಗೆ ವ್ಯವಸ್ಥೆ ಮಾಡಿದರು. ಈ ಸೇವಾಶ್ರಮದ ಕಾರ್ಯಕರ್ತರು ಅಸ್ಪೃಶ್ಯರ ಕೇರಿಗಳಿಗೆ ಹೋಗಿ ಸ್ವಚ್ಛತೆ, ಪಾನ ನಿರೋಧ, ಸಾಕ್ಷರತೆ ವಿಚಾರಗಳ ಬಗ್ಗೆ ಜಾಗೃತಿ ಮೂಡಿಸಿದರು. ಮುಂದೆ ಗಾಂಧೀಜಿ ಕೊಡಗಿಗೆ ಭೇಟಿ ನೀಡಿದ್ದಾಗ ಅಲ್ಲಿನ ಹರಿಜನ ಕೇರಿಗಳ ಸ್ವಚ್ಛತೆ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಮೈಸೂರು ಸಂಸ್ಥಾನವೂ ಸಹ ಹರಿಜನೋದ್ಧಾರ ಕಾರ್ಯಗಳಿಗೆ ಸಾಕಷ್ಟು ಒತ್ತು ನೀಡಿತ್ತು. ಮೈಸೂರು ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರು ಪ್ರಗತಿಪರರಾಗಿದ್ದು ಹರಿಜನೋದ್ಧಾರ ಕಾರ್ಯಗಳಿಗೆ ಚಾಲನೆ ನೀಡಿದ್ದರು. ಇದರಲ್ಲಿ ಗಾಂಧೀಜಿಯವರ ಒತ್ತಾಸೆಯೂ ಇತ್ತು. 1925 ರಲ್ಲಿ ಆರ್ ಗೋಪಾಲಸ್ವಾಮಿ ಅಯ್ಯರ್ ನೇತೃತ್ವದಲ್ಲಿ ಪಂಚಮರ ಸಮ್ಮೇಳನ ತುಮಕೂರು ಜಿಲ್ಲೆಯ ಕೊರಟಗೆರೆಯಲ್ಲಿ ನಡೆಯಿತು. ಇಲ್ಲಿ ಪಂಚಮರನ್ನು ಜಾತಿಯ ಹೆಸರಿಗೆ ಬದಲಾಗಿ ಆದಿ ಕರ್ನಾಟಕ ಎಂದು ಕರೆಯಬೇಕೆಂಬ ಒತ್ತಾಯವನ್ನು ಒಪ್ಪಿದ ಮಹಾರಾಜ ನಾಲ್ವಡಿಯವರು 1925 ಅಕ್ಟೋಬರ್ 1 ರಂದು ಸರ್ಕಾರಿ ಆಜ್ಞೆ ಹೊರಡಿಸಿದರು. 1926–27ರಲ್ಲಿ ಪಂಚಮರಿಗೆ ರಾಜ್ಯಾದಾದ್ಯಂತ 632 ಶಾಲೆಗಳನ್ನು ತೆರೆಯಲಾಗಿದ್ದು 17707 ವಿದ್ಯಾರ್ಥಿಗಳಿದ್ದರು. 1927ರಲ್ಲಿ ಪಂಚಮರ ಬೋರ್ಡಿಂಗ್ ಹೋಮನ್ನು 'ನರಸಿಂಹರಾಜ ಹಾಸ್ಟೆಲ್' ಎಂದು ನಾಮಕರಣ ಮಾಡಿ, ಸಂಸ್ಥಾನದಿಂದ ಅನುದಾನ ನೀಡಲಾಯಿತು. ಕರ್ನಾಟಕ ಪ್ರವಾಸದಲ್ಲಿದ್ದ ಗಾಂಧೀಜಿಯವರನ್ನು ಆಹ್ವಾನಿಸಿದ ದಿವಾನ ಮಿರ್ಜಾ ಇಸ್ಮಾಯಿಲ್ ಅವರ ವಿಶ್ರಾಂತಿಗೆ ಬೆಂಗಳೂರು ಸಮೀಪದ ನಂದಿಬೆಟ್ಟದಲ್ಲಿ ವ್ಯವಸ್ಥೆ ಮಾಡಿದರು. ಈ ಸಂದರ್ಭದಲ್ಲಿ ಐಯ್ಯರ್ ನರಸಿಂಹರಾಜ ಹಾಸ್ಟೆಲ್‌ಗೆ ಗಾಂಧೀಜಿಯನ್ನು ಕರೆತಂದು ವಿದ್ಯಾರ್ಥಿಗಳ

[15] ಚಂದ್ರಶೇಖರ್ ಎಸ್. ಮತ್ತು ಸುರೇಂದ್ರರಾವ್ ಬಿ. (ಸಂ.). (2016). ಕರ್ನಾಟಕದ ಸಾಮಾಜಿಕ ಮತ್ತು ಆರ್ಥಿಕ ಚರಿತ್ರೆಯ ಕೆಲವು ನೆಲೆಗಳು, ಸಂಪುಟ 10, ಬೆಂಗಳೂರು. ಪು.203.

ಪರಿಚಯ ಮಾಡಿಕೊಟ್ಟರು. ಅಲ್ಲದೆ ತುಮಕೂರು ಬೋರ್ಡಿಂಗ್ ಹೋಂಗೆ ಗಾಂಧೀಜಿ ಭೇಟಿ ನೀಡುವ ವ್ಯವಸ್ಥೆ ಮಾಡಿದರು.[16]

ನಾಲ್ವಡಿ ಕೃಷ್ಣರಾಜ ಒಡೆಯರು ಹರಿಜನ ಸದಸ್ಯರಿಗೆ ಪ್ರಥಮ ಬಾರಿಗೆ ಅರಮನೆ ಪ್ರವೇಶಿಸಲು ಅವಕಾಶ ಕಲ್ಪಿಸಿಕೊಟ್ಟಿದ್ದು ಹಲವರ ಹುಬ್ಬೇರಿಸುವಂತೆ ಮಾಡಿತು. ಗಾಂಧೀಜಿ 1936ರಲ್ಲಿ ಹರಿಜನ ಅಭಿವೃದ್ಧಿಗಾಗಿ ರಾಜ್ಯದ ವಿವಿಧ ಭಾಗಗಳಲ್ಲಿ ಪ್ರವಾಸ ಕೈಗೊಂಡರು. ಈ ಸಂದರ್ಭದಲ್ಲಿ ಬೆಂಗಳೂರಿಗೆ ಆಗಮಿಸಿ ಹರಿಜನ ಕಾಲೋನಿಗಳಿಗೆ ಭೇಟಿ ನೀಡಿ ಸ್ವಚ್ಛತೆಯನ್ನು ಕಾಪಾಡಬೇಕು, ಮದ್ಯಪಾನ ಸೇವನೆಯನ್ನು ತ್ಯಜಿಸಬೇಕೆಂದು ಅವರಲ್ಲಿ ಅರಿವು ಮೂಡಿಸಿದರು. ಈ ಭೇಟಿಯ ಸಂದರ್ಭದಲ್ಲೇ ಸಾರ್ವಜನಿಕ ಸಭೆಗಳಲ್ಲಿ ಅಸ್ಪೃಶ್ಯತೆಯನ್ನು ತೊಡೆದು ಹಾಕಲು ಕರೆ ನೀಡಿದರು.

ಮಹಾತ್ಮ ಗಾಂಧೀಜಿ 01.03.1934 ರಂದು ಸಿದ್ಧಾಪುರಕ್ಕೆ ಭೇಟಿ ನೀಡಿ ಶ್ರೀ ವೆಂಕಟರಾಯ ದೇವಾಲಯವನ್ನು ಹರಿಜನರಿಗಾಗಿ ಉದ್ಘಾಟಿಸಿದರು. ಸಿರಸಿಯ ದೇವಾಲಯದಲ್ಲಿ ನಡೆಯುತ್ತಿದ್ದ ಪ್ರಾಣಿಬಲಿಯನ್ನು ಖಂಡಿಸಿ ಅದನ್ನು ತಡೆಗಟ್ಟಲು ಜನತೆಯನ್ನು ಕೋರಿದರು. 1934ರಲ್ಲಿ ಗಾಂಧೀಜಿ ದಾವಣಗೆರೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಹರಿಜನ ವಿದ್ಯಾರ್ಥಿಗಳಿಗಾಗಿ ನಿರ್ಮಿಸಿದ್ದ ವಿದ್ಯಾರ್ಥಿ ನಿಲಯವೊಂದನ್ನು ಉದ್ಘಾಟಿಸಿದರು. ಕರ್ನಾಟಕ ಹರಿಜನ ಸೇವಕ ಸಂಘದ ಅಧ್ಯಕ್ಷರಾದ ವೀರಣ್ಣಗೌಡ ಪಾಟೀಲ್ ಮತ್ತು ಅವರ ಪತ್ನಿ ನಾಗಮ್ಮನವರು ಹರಿಜನಾಭಿವೃದ್ಧಿಗೆ ಶ್ರಮಿಸಿದರು. 1934ರಲ್ಲಿ ಹುಬ್ಬಳ್ಳಿಯಲ್ಲಿ ಅಸ್ಪೃಶ್ಯ ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕಾಗಿ 'ಹರಿಜನ ಬಾಲಿಕಾಶ್ರಮ' [17] ತೆರೆದರು. ಮಥುರಾ ಮತ್ತು ತಾರಾ ಎಂಬ ಇಬ್ಬರು ಹರಿಜನ ಬಾಲಕಿಯರಿಂದ ಪ್ರಾರಂಭವಾದ ಈ ಆಶ್ರಮ ಮುಂದೆ ಮಹಿಳಾ ವಿದ್ಯಾಲಯವಾಗಿ ಪ್ರಗತಿ ಹೊಂದಿತು.

ಪಂಡಿತ ತಾರಾನಾಥ ಹೈದರಾಬಾದ್ ಕರ್ನಾಟಕದಲ್ಲಿ, ಹೆಚ್.ಸಿ. ದಾಸಪ್ಪ ಮತ್ತು ಅವರ ಪತ್ನಿ ಯಶೋಧಮ್ಮ ಮೈಸೂರಿನಲ್ಲಿ ಹರಿಜನ ಸೇವಕ ಸಂಘಕ್ಕಾಗಿ ದುಡಿದ ಗಣ್ಯರು. ಬೆಂಗಳೂರಿನಲ್ಲಿ ಎಂ.ಎ. ಪರಶುರಾಂ ಅವರು ತಮ್ಮ ಸ್ನೇಹಿತರೊಂದಿಗೆ ಸೇರಿ 'ದರಿದ್ರ ನಾರಾಯಣ ಸೇವಾ ಸಂಘ' ಸ್ಥಾಪಿಸಿದರು. ಪಟ್ಟಾಭಿರಾಮನ್, ಮುನಿಸ್ವಾಮಿ, ಜಯರಾಂ ಮುಂತಾದ ಸದಸ್ಯರು ಅಸ್ಪೃಶ್ಯತಾ ನಿವಾರಣೆ ಜೊತೆಗೆ ಮದ್ಯಪಾನ ನಿಷೇಧ, ಪ್ರಾಣಿಬಲಿ ತಡೆಗಳನ್ನು ಪ್ರಚಾರ ಮಾಡಿದರು. ಈ ಸಂಘದ ಕಾರ್ಯಕರ್ತರು ಬಿಡುವಿನ ವೇಳೆಯಲ್ಲಿ ಹರಿಜನರ ಕೇರಿಗಳನ್ನು ಸ್ವಚ್ಛಗೊಳಿಸಿಕೊಟ್ಟು

[16] ಚಿನ್ನಸ್ವಾಮಿ ಸೋಸಲೆ (ಸಂ.). (2012). ದಿವಾನ್ ಸರ್ ಮಿರ್ಜಾ ಎಂ. ಇಸ್ಮಾಯಿಲ್ ಕಾಲದ ಮೈಸೂರು ಸಂಸ್ಥಾನ, ಹಂಪಿ. ಪು.309 ಮತ್ತು 369.

[17] ಸರೋಜಿನಿ ಸಿಂಧ್ರಿ ಅಂಡ್ ರಾಘವೇಂದ್ರ ಕೆ. (1983). ವಿಮೆನ್ ಫ್ರೀಡಂ ಫೈಟರ್ಸ್ ಇನ್ ಕರ್ನಾಟಕ, ಧಾರವಾಡ, ಪು.32.

ನೈರ್ಮಲ್ಯವನ್ನು ಕಾಪಾಡಿಕೊಳ್ಳಲು ತಿಳಿಸುತ್ತಿದ್ದರು. ಬೆಂಗಳೂರಿನ ಆಂಜನೇಯಪ್ಪ ಗಾರ್ಡನ್‌ನಲ್ಲಿ ಹರಿಜನರಿಗಾಗಿ ಒಂದು ಶಾಲೆ ಮತ್ತು ವಾಚನಾಲಯವನ್ನು ಪ್ರಾರಂಭಿಸಲಾಯಿತು.

ಗಾಂಧೀಜಿ 2ನೇ ಬಾರಿ ಹರಿಜನೋದ್ಧಾರಕ್ಕಾಗಿ ಕರ್ನಾಟಕದಾದ್ಯಂತ ಪ್ರಚಾರ ಪ್ರವಾಸ ಕೈಗೊಂಡಿದ್ದರು. ಜೂನ್ 1936ರಲ್ಲಿ ಕೆಂಗೇರಿ ಗುರುಕುಲಾಶ್ರಮದಲ್ಲಿ ಏರ್ಪಟ್ಟಿದ್ದ 'ದಕ್ಷಿಣ ಭಾರತ ಹರಿಜನ ಕಾರ್ಯಕರ್ತರ ಸಮ್ಮೇಳನದಲ್ಲಿ ಭಾಗವಹಿಸಿದ್ದರು. 1936ರಲ್ಲಿ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿಯಲ್ಲಿ ಹರಿಜನರ ಬೃಹತ್ ಸಮಾವೇಶ ಜರುಗಿ ಹರಿಜನೋದ್ಧಾರದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು.[18]

ಹೀಗೆ ಗಾಂಧೀಜಿಯವರು ತಮ್ಮ ಬದುಕಿನುದ್ದಕ್ಕೂ, ಜಾತಿ–ಭೇದ, ಮತ–ಭೇದಗಳ ವಿರುದ್ಧ ಹೋರಾಡುತ್ತಾ ಸಮಾಜವನ್ನು ತಿದ್ದುತ್ತಾ ಬಂದರು. ಸರ್ವೇಜನಾಃ ಸುಖಿಃನೋ ಭವತುಃ ಎಂದೂ, ಈಶ್ವರ, ಅಲ್ಲಾ ತೇರೇ ನಾಮ್ ಸಬ್‌ಕೋ ಸನ್ಮತಿ ದೇ ಭಗವಾನ್ ಎಂದೂ ಸರ್ವರ ಸುಖ ಶಾಂತಿ ಬಯಸಿದವರು ಗಾಂಧೀಜಿ. ಕೊನೆಗೆ ಗಾಂಧೀಜಿಯವರ ಈ ಜಾತ್ಯಾತೀತ ನಿಲುವೇ ಅವರ ಪ್ರಾಣಕ್ಕೆ ಕುತ್ತು ತಂದಿತು. ಗಾಂಧೀಜಿಯವರ ಸರ್ವಜನಾಂಗದ ಐಕ್ಯತಾ ಮಂತ್ರ ಕೆಲ ಮತಾಂಧರಿಗೆ ಸರಿ ಕಾಣಲಿಲ್ಲ. ಹೀಗಾಗಿಯೇ ಗಾಂಧೀಜಿ ನಾಥೂರಾಂ ಗೂಡ್ಸೆ ಎಂಬ ಮತಾಂಧನ ಗುಂಡಿನ ದಾಳಿಗೆ ಬಲಿಯಾಗಬೇಕಾಯಿತು.

ಅಸ್ಪೃಶ್ಯತಾ ನಿವಾರಣೆಯೆಂಬುದು ಸಮಾಜದ ಮನಃಸ್ಥಿತಿಯಲ್ಲಿ ಸಂಪೂರ್ಣ ಬದಲಾಗದ ಹೊರತು ಯಾರೊಬ್ಬರು ಮಾಡಿ ಮುಗಿಸಬಹುದಾದ ಕಾರ್ಯ ಅಲ್ಲ. ಅಷ್ಟಕ್ಕೂ ಈ ಅಸಮಾನತೆಯನ್ನು ತೊಲಗಿಸುವ ಹಲವಾರು ಪ್ರಯತ್ನಗಳು ಗಾಂಧೀಜಿಗಿಂತ ಸಾಕಷ್ಟು ಮೊದಲೇ ನಡೆದಿವೆ. ಚಿಂತಕರು ಸುಧಾರಕರೂ ಆದ ಮಹಾವೀರ, ಬುದ್ಧ, ಬಸವಣ್ಣ, ರಾಜಾರಾಂ ಮೋಹನ್ ರಾಯ್, ದಯಾನಂದ ಸರಸ್ವತಿ, ಸ್ವಾಮಿ ವಿವೇಕಾನಂದ, ಅಂಬೇಡ್ಕರ್ ಮುಂತಾದವರು ಈ ನಿಟ್ಟಿನಲ್ಲಿ ದುಡಿದಿದ್ದಾರೆ. ಇಂತಹ ಮಹನೀಯರಿಂದಲೇ ಅಸ್ಪೃಶ್ಯತೆಯೆಂಬ ಈ ಮಹಾಮಾರಿಯನ್ನು ಸಂಪೂರ್ಣವಾಗಿ ತೊಡೆದು ಹಾಕಲು ಸಾಧ್ಯವಾಗದೇ ಇರುವಾಗ ತಾನೊಬ್ಬನೇ ಈ ಕಾರ್ಯದಲ್ಲಿ ಪೂರ್ಣ ಪ್ರಮಾಣದ ಯಶಸ್ಸು ಪಡೆಯುವನೆಂಬ ಭ್ರಮೆ ಗಾಂಧೀಜಿಗೆ ಇದ್ದಂತೆ ತೋರುವುದಿಲ್ಲ. ಆದಾಗ್ಯೂ ಗಾಂಧೀಜಿ ಈ ದಿಸೆಯಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಿರುವುದನ್ನು ಅಲ್ಲಗಳೆಯುವಂತಿಲ್ಲ. ಹೀಗೆ ಗಾಂಧೀಜಿ ಸೇರಿದಂತೆ ಹಲವಾರು ಮಹನೀಯರ ತ್ಯಾಗ, ಹೋರಾಟದ ಫಲವಾಗಿ ಅಸ್ಪೃಶ್ಯತಾಚರಣೆ ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿದೆ. ಗಾಂಧೀಜಿ ಬದುಕಿದ್ದ ಕಾಲದ ಅಸ್ಪೃಶ್ಯತೆಯ ಕರಾಳತೆ ಈಗಿಲ್ಲ. ಈ ಹಿಂದೆ ಸಾರ್ವಜನಿಕ ಶಾಲೆ, ಕೆರೆ, ಬಾವಿ,

[18] ಪೂರ್ವೋಕ್ತ., ಅಡಿಟಿಪ್ಪಣಿ 12, ಪು.70–71.

ದೇವಾಲಯಗಳು ಮುಂತಾದವುಗಳ ಬಳಕೆಗೆ ಹಿಂಜರಿಯುತ್ತಿದ್ದ ಅಸ್ಪೃಶ್ಯರಿಗೆ ಈಗ ಅದು ತಮ್ಮ ಹಕ್ಕೆಂಬ ಜಾಗೃತಿ ಮೂಡಿದೆ. ಹೋಟೆಲ್, ಕ್ಷೌರದಂಗಡಿ ಮುಂತಾದ ಕಡೆ ಮುಕ್ತ ಪ್ರವೇಶ ದೊರೆಯುತ್ತಿದೆ. ಇದಕ್ಕೆ ಕಾನೂನಿನ ಬಲವೂ ಇದೆ.

**ಉಪಸಂಹಾರ**

ಈ ಎಲ್ಲಾ ಹಿನ್ನೆಲೆಯಲ್ಲಿ ನೋಡುವುದಾದಲ್ಲಿ ಗಾಂಧೀಜಿ ಸಮಾಜದಲ್ಲಿ ಮನೆಮಾಡಿದ್ದ ಅಸಮಾನತೆ, ಅನ್ಯಾಯಗಳ ವಿರುದ್ಧ ಜನಜಾಗೃತಿ ಮೂಡಿಸಿದರು. ಸ್ವಾವಲಂಬನೆಯ ಪಾಠ ಹೇಳಿದರು, ಸರ್ವೋದಯದ ಮಂತ್ರ ಜಪಿಸಿದರು, ಕೊನೆಗೆ ನನ್ನ ಜೀವನವೇ ನನ್ನ ಸಂದೇಶ ಎಂದರು. ಗಾಂಧೀಜಿ ಬದುಕಿದ ಸಮಾಜ ಮತ್ತು ಸಂದರ್ಭ ಪ್ರಸ್ತುತ ಕಾಲಘಟ್ಟದಲ್ಲಿ ಸಂಪೂರ್ಣ ವಿಭಿನ್ನವಾಗಿರುವುದರಿಂದ ಅವರು ಪ್ರತಿಪಾದಿಸಿದ ಮೌಲ್ಯಗಳು ಈಗಿನ ಕಾಲಕ್ಕೆ ಹೇಗೆ ಸಲ್ಲುತ್ತವೆ ಎಂಬ ಪ್ರಶ್ನೆ ಕಾಡುತ್ತದೆ. ಹೀಗಿದ್ದರೂ ಅವರು ಎಲ್ಲ ಕಾಲಕ್ಕೆ, ಎಲ್ಲ ನಾಯಕರಿಗೆ ಹಾಗೂ ಜನರಿಗೆ ದಾರಿದೀಪವಾಗಿ, ತೋರುಗಂಬವಾಗಿ ಮಾರ್ಗದರ್ಶನ ಮಾಡುವ ಹಲವಾರು ಆಚರಣೆಗಳನ್ನು ನಮಗೆ ಬಿಟ್ಟುಹೋಗಿದ್ದಾರೆ. ಅವರು ಆಚರಿಸಿದ ಈ ವಿಧಾನಗಳನ್ನು ಮತ್ತೆ ಪ್ರಸ್ತುತ ಸನ್ನಿವೇಶದಲ್ಲಿ ಪ್ರಯೋಗಿಸುವ ಮೂಲಕ ಗಾಂಧೀಜಿಯ ಪ್ರಸ್ತುತತೆಯನ್ನು ಕಂಡುಕೊಳ್ಳಬಹುದಾಗಿದೆ.

**ಪರಾಮರ್ಶನ ಗ್ರಂಥಗಳು**


- ಭಾರತೀ ಥಾಕೂರ್. (2000). ವಿಮೆನ್ ಇನ್ ಗಾಂಧೀಸ್ ಮಾಸ್ ಮೂವ್‌ಮೆಂಟ್ಸ್. ದೀಪ ದೀಪ ಪಬ್ಲಿಕೇಷನ್, ನ್ಯೂಡೆಲ್ಲಿ,
- ಚಂದ್ರಶೇಖರ್ ಎಸ್. ಮತ್ತು ಸುರೇಂದ್ರರಾವ್ ಬಿ. (ಸಂ.). (2016). ಕರ್ನಾಟಕದ ಸಾಮಾಜಿಕ ಮತ್ತು ಆರ್ಥಿಕ ಚರಿತ್ರೆಯ ಕೆಲವು ನೆಲೆಗಳು. ಸಂಪುಟ 10, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು.
- ಚಿನ್ನಸ್ವಾಮಿ ಸೋಸಲೆ (ಸಂ.). (2012). ದಿವಾನ್ ಸರ್ ಮಿರ್ಜಾ ಎಂ. ಇಸ್ಮಾಯಿಲ್ ಕಾಲದ ಮೈಸೂರು ಸಂಸ್ಥಾನ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಗೊರೂರು ರಾಮಸ್ವಾಮಿ ಅಯ್ಯಂಗಾರ್. (1995). ಮೋ.ಕ.ಗಾಂಧಿ ಆತ್ಮಕಥೆ ಅಥವಾ ಸತ್ಯಾನ್ವೇಷಣೆ, ನವಜೀವನ್ ಪಬ್ಲಿಷಿಂಗ್ ಹೌಸ್, ಅಹಮದಾಬಾದ್.
- ಹಾಲಪ್ಪ ಜಿ.ಎಸ್. (1968). ಫ್ರೀಡಂ ಮೂವೆಮೆಂಟ್ ಇನ್ ಕರ್ನಾಟಕ. ಸಂಪುಟ–2, ಗೌರ್ನಮೆಂಟ್ ಆಫ್ ಮೈಸೂರು, ಮೈಸೂರು.

- ಜನಪದ ಮಾಸಪತ್ರಿಕೆ (ಅಕ್ಟೋಬರ್,2018). ಗಾಂಧೀ ಜಯಂತಿ ವಿಶೇಷ ಸಂಚಿಕೆ. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಬೆಂಗಳೂರು.
- ಜವರೇಗೌಡ. ದೇ. (1996). ಕ್ರಾಂತಿಕಾರ ಡಾ. ಅಂಬೇಡ್ಕರ್. ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
- ಮೂರ್ತಿ ಟಿ.ಎಚ್. (2008). ಜಿ.ಆರ್. ಗೋಪಾಲಸ್ವಾಮಿ ಅಯ್ಯರ್. ಗಾಂಧಿ ಉಪನ್ಯಾಸ ಮಾಲೆ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
- ಮೌಲಾನಾ ಅಬ್ದುಲ್ ಕಲಾಂ ಅಜಾದ್ (ಸಂ.). (1953). ಗಾಂಧಿಯನ್ ಔಟ್‌ಲುಕ್ ಅಂಡ್ ಟೆಕ್ನಿಕ್ಸ್. ಗೌರ್ನಮೆಂಟ್ ಆಫ್ ಇಂಡಿಯಾ, ನ್ಯೂಡೆಲ್ಲಿ.
- ನಾಗಭೂಷಣ ಡಿ.ಎಸ್. (2017). ಇಂದಿಗೆ ಬೇಕಾದ ಗಾಂಧಿ, ಮೂನಿಸ್ವಾಮಿ ಅಂಡ್ ಸನ್ಸ್, ಬೆಂಗಳೂರು.
- ನಾಗರತ್ನಮ್ಮ ಎಸ್. (2009). ಕರ್ನಾಟಕದಲ್ಲಿ ಅಸಹಕಾರ ಮತ್ತು ನಾಗರಿಕ ಕಾನೂನು ಭಂಗ ಚಳುವಳಿ. ದೇಸಿ ಪುಸ್ತಕ, ಬೆಂಗಳೂರು. ಪ್ರಜಾವಾಣಿ. (4ನೇ ಡಿಸೆಂಬರ್ 2011). ಸಾಪ್ತಾಹಿಕ ಪುರವಣಿ. ದಿನಪತ್ರಿಕೆ. ಬೆಂಗಳೂರು.
- ಸರೋಜಿನಿ ಸಿಂದ್ರಿ ಅಂಡ್ ರಾಘವೇಂದ್ರ ಕೆ. (1983). ವಿಮೆನ್ ಫ್ರೀಡಂ ಫೈಟರ್ಸ್ ಇನ್ ಕರ್ನಾಟಕ, ಪ್ರಸಾರಾಂಗ, ಧಾರವಾಡ.
- ಸಂವಾದ ಮಾಸಪತ್ರಿಕೆ. (ಜನವರಿ, 2012). ಬೆಂಗಳೂರು.
- ಶ್ರೀನಿವಾಸಮೂರ್ತಿ ಎ.ಪಿ. (1994). ಭಾರತದ ಸ್ವಾತಂತ್ರ್ಯ ಚಳುವಳಿ 1857–1947. ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
- ಸುಮಿತ್ರಾಗಾಂಧೀ ಕುಲಕರ್ಣಿ (ಮೂಲ), ಬಿ.ವೈ. ಲಲಿತಾಂಬ (ಅನು). (2010) ಮಹಾತ್ಮಗಾಂಧಿ ನನ್ನ ತಾತ, ಭಾಗ–2, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು.
- ವರ್ಮ ಬಿ.ಆರ್. ಅಂಡ್ ಭಕ್ಷಿ ಎಸ್.ಆರ್. (ಸಂ). (2005) ಗಾಂಧಿ ಅಂಡ್ ಸತ್ಯಾಗ್ರಹ ಅಂಡ್ ಹಿಸ್ ಟೆಕ್ನಿಕ್ಸ್. ಕಾಮನ್‌ವೆಲ್ತ್ ಪಬ್ಲಿಷರ್, ನ್ಯೂಡೆಲ್ಲಿ,